ಅಧಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಬಂಧ ರಚಿಸಲಾಗುವ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಯಾವ್ಯಾವ ಮಾನ್ಯ ಸದಸ್ಯರುಗಳಿರುತ್ತಾರೆಂಬ ಪಟ್ಟಿಯನ್ನು ನಾವು ಸರ್ಕಾರದ ವತಿಯಿಂದ ಅನಂತರ ಮಾನ್ಯ ಅಧ್ಯಕ್ಷರಿಗೆ ತಲುಪಿಸುತ್ತೇವೆ. ಕೊನೆಯದಾಗಿ, ನನ್ನ ಪ್ರಾ[illegible]ನೆ ಇಷ್ಟೆ; ಇಡೀ ರಾಷ್ಟ್ರದಲ್ಲಿ ಇವತ್ತು ಕರ್ನಾಟಕ ರಾಜ್ಯದ ಶಿಕ್ಷಣ ಪದ್ಧತಿ ಯಾವ ರೀತಿಯಲ್ಲಿ ಪ್ರಗತಿಯಾಗಿದೆ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಸದಸ್ಯರಾಗುವವರೆಲ್ಲರೂ ಕೂಡ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಸಲಹೆ-ಸೂಚನೆಗಳನ್ನು ಕೊಡಬೇಕೆಂದು ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಇದರ ಬಗ್ಗೆ ರಾಷ್ಟ್ರವ್ಯಾಪಿಯಾಗಿ ಚರ್ಚೆಯಾಗಬೇಕೆಂದು ಹಾಗೂ ಪರಿಶೀಲನೆಗಾಗಿ ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಮಹಿಸಿಕೊಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದೆ. ಈ ವಿಧೇಯಕ ಪರಿಪೂರ್ಣವಾಗಿರಬೇಕೆಂಬ ಮಾನ್ಯ ಸಚಿವರ ಉದ್ದೇಶವೇನಿದೆ, ಈ ಕುರಿತು ಮಾತನಾಡಿರುವ ಎಲ್ಲಾ ಮಾನ್ಯ ಸದಸ್ಯರ ವಿಚಾರಗಳಿಗೆ ಸ್ಪಂದಿಸಿ ಅವರು ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಮಹಿಸಿಕೊಡಲು ಒಪ್ಪಿರುವುದು ನನಗೆ ಬಹಳ ಸಂತೋಷವಾಗಿದೆ. ಇದಕ್ಕಾಗಿ ನಾನು ಅವರಿಗೆ ಹೃತ್ಪೂರ್ವಕವಾಗಿ ಅಧಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

## 3. ಅಧ್ಯಕ್ಷರ ಅನುಮತಿ ಮೇರೆಗೆ

(1) ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನಲ್ಲಿನ ನೇಮಕಾತಿ ಕುರಿತು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವೇನೆಂದರೆ ಮಾನ್ಯ ಸಹಕಾರ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಸದನದಲ್ಲಿದ್ದು, ಅವರ ಗಮನಕ್ಕೆ ಒಂದು ವಿಚಾರ ತರುವುದೇನೆಂದರೆ, ಬಿಜಾಪುರದ ಡಿ.ಸಿ.ಸಿ. ಬ್ಯಾಂಕಿಗೆ ಸಂಬಂಧಿಸಿದಂತೆ ಈಗಿದ ಒಂದು ವಾರದಿಂದಲೂ ಸಮಸ್ಯೆಯುಂಟಾಗಿದೆ. ಅಲ್ಲಿ ನೇಮಕಾತಿ ಬಂದ್ ಆಗಿದ್ದು, ನೇಮಕಾತಿಗೆ ತಡೆಯಾಜ್ಞೆ ಕೊಟ್ಟಿದ್ದಾರೆ. ಈ ವಿಷಯವನ್ನು ಮೊನ್ನೆ ದಿನವೇ ಪ್ರಸ್ತಾಪಿಸಲಾಗಿತ್ತು. ಇಡೀ ರಾಜ್ಯದ ಯಾವುದೇ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಇಂತಹ ಸಮಸ್ಯೆ ಇರದೇ ಬಿಜಾಪುರದ ಡಿ.ಸಿ.ಸಿ. ಬ್ಯಾಂಕಿನಲ್ಲಿ ಮಾತ್ರ ಇದ್ದು, ಇದರ ಬಗ್ಗೆ ಮಾನ್ಯ ಸದಸ್ಯರಾದ ಪಾಟೀಲ್ ಶಿವಾನಂದ ಸಿದ್ದಾಪುರಗೌಡರವರು ಪತ್ರ ಬರೆದಿದ್ದರೂ ಉತ್ತರ ಬಂದಿರುವುದಿಲ್ಲ; ಏನೂ ಕ್ರಮ ಕೈಗೊಂಡಿರುವುದಿಲ್ಲ, ಅಲ್ಲಿ ಬಹಳಷ್ಟು ಅನ್ಯಾಯವಾಗುತ್ತಿದೆಯೆಂದು ಅವರು ಹೇಳುತ್ತಿರುವುದರಿಂದ, ಮಾನ್ಯ ಸಹಕಾರ ಸಚಿವರಾಗಿರುವ ತಮ್ಮ ಖಾತೆ ವ್ಯಾಪ್ತಿಗೆ ಇದು ಬರುವುದರಿಂದ ಕೋರ್ಟಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ ಅಲ್ಲಿ ನೇಮಕಾತಿಯಾಗುವಂತೆ ಕ್ರಮ ಕೈಗೊಳ್ಳಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ತಿಕೋಟ) :— ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ನೇಮಕಾತಿ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ವಿರೋಧಪಕ್ಷದ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಕೆಲವು ವಿಚಾರದಲ್ಲಿ ಸ್ಪಷ್ಟೀಕರಣವನ್ನು ಸರ್ಕಾರದಿಂದ ಕೇಳಿದ್ದರೆಂದು ನನಗನ್ನಿಸುತ್ತದೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಂಥ ಸಮಯದಲ್ಲಿ, 65 ಹುದ್ದೆಗಳಿಗೆ ನೇಮಕ ಮಾಡುವಂತೆ ಆದೇಶಿಸಿತ್ತು. ಇದಕ್ಕೆ ಸನ್ಮಾನ್ಯ ಸಚಿವರು ಸ್ಟೇ ಆರ್ಡರ್ ಕೊಟ್ಟರು. ಅದು ಕ್ವಾಶಿ ಜ್ಯುಡಿಷಿಯಲ್ ಅಥಾರಿಟಿಯಾಗಿರುವುದರಿಂದ ಅವರು ಸ್ಟೇ ಕೊಡಲಿ, ಬೇಡವೆನ್ನುವುದಿಲ್ಲ. ಆದರೆ, ಇದರ ಬಗ್ಗೆ ಏನಾದರೂ ವಿಚಾರಣೆ ಮಾಡಿ, ನಮ್ಮಿಂದ ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು. ಒಂದು ವರ್ಷವಾಗುತ್ತಿದೆ. ಇದರ ಬಗ್ಗೆ ನಾನು ಮೇಲಿಂದ ಮೇಲೆ ಮಾನ್ಯ ಸಚಿವರನ್ನು ಕಂಡು ಭೇಟಿಯಾಗಿ ಮಾತನಾಡಿದ್ದೇನೆ. ಅವರ ಮೇಲೆ ನಾನು ನೇರವಾಗಿ ಆರೋಪ ಮಾಡುತ್ತಿಲ್ಲ. ಅವರ ಮೇಲೆ ಯಾರಿಂದಲೋ ಒತ್ತಡ ಬಂದಿರಬಹುದು, ಇಲ್ಲವೆನ್ನುವುದಿಲ್ಲ. ಬ್ಯಾಂಕಿಗೆ ಕೊಟ್ಟಿರುವ ತಡೆಯಾಜ್ಞೆಯಿಂದಾಗಿ ಇವೊತ್ತು ಬ್ಯಾಂಕಿನ ವಹಿವಾಟು ಸಂಪೂರ್ಣ ನಿಂತುಹೋಗಿದೆ. ಸುಮಾರು ಹತ್ತು ವರ್ಷಗಳ ಹಿಂದೆ ಡಿ.ಸಿ.ಸಿ. ಬ್ಯಾಂಕಿನ ವ್ಯವಹಾರವೇನಿತ್ತು, ಅದನ್ನು ಇವೊತ್ತಿಗೆ ಹೋಲಿಸಿದರೆ ಕನಿಷ್ಠ 250 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ವ್ಯವಹಾರವಾಗುತ್ತಿದೆ. ಅಲ್ಲಿನ ನೇಮಕಾತಿಗೆ ಸಂಬಂಧಿಸಿದಂತೆ 1985ರಲ್ಲಿ ಸ್ಕಾಂಕ್ಷನ್ಡ್ ಸ್ಟ್ರೆಂಥ್ ಏನಿತ್ತು, ಅದರ ಪ್ರಕಾರವೇ ನಾನು ಕೇಳುತ್ತಿದ್ದೇನೆ. ಇವೊತ್ತಿನ ಸ್ಕಾಂಕ್ಷನ್ಡ್ ಸ್ಟ್ರೆಂಥ್‌ಗೆ ತಾವು ತೋರಿಸಿ ನೋಡಿದಲ್ಲಿ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ತಾವು ಹೆಚ್ಚಿಗೆ ಕೊಡಬೇಕಾಗುತ್ತದೆ. ಆದರೆ, ಅದನ್ನು ನಾನು ಕೇಳುತ್ತಿಲ್ಲ. 1985ರಲ್ಲಿ ಸ್ಕಾಂಕ್ಷನ್ಡ್ ಸ್ಟ್ರೆಂಥ್ ಏನಿತ್ತು, ಅದರಲ್ಲಿ ಅರ್ಜೆಸ್ ಆಗಿರುವ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪದೇ ಪದೇ ತಮ್ಮಲ್ಲಿ ವಿನಂತಿಸಿಕೊಂಡಿದ್ದೇನೆ. ತಾವು ಒಂದು ವರ್ಷದವರೆಗೆ ಅದನ್ನು ತಡೆಯಾಜ್ಞೆ ಇಟ್ಟಿದ್ದೀರಿ. ಅದನ್ನು ಪ್ರಶ್ನಿಸಿ ಕೆಲವು ಸಾರ್ವಜನಿಕರು ಹೈಕೋರ್ಟಿಗೆ ಹೋಗಿ ರಿಟ್ ಅರ್ಜಿ ಸಲ್ಲಿಸಿದರು. ಅದನ್ನು ಹೈಕೋರ್ಟ್ ಎಂಟರ್‌ಟೇನ್ ಮಾಡಲಿಲ್ಲ. ದುರ್ದೈವವೆಂದರೆ, ಇದುವರೆಗೂ ಸರ್ಕಾರ ಅದನ್ನು ಹಿಂತೆಗೆದುಕೊಂಡಿಲ್ಲ. ಆಗ ನಾನು ಕೂಡ ಸರ್ಕಾರ ತಂದಿರುವ ತಡೆಯಾಜ್ಞೆಯನ್ನು ಪ್ರಶ್ನಿಸಿ ಹೈಕೋರ್ಟಿಗೆ ಹೋಗಬಹುದಿತ್ತು. ಆ ಕೆಲಸವನ್ನು ನಾನು ಮಾಡಲಿಲ್ಲ. ಇದು ತಮಗೂ ಗೊತ್ತಿದೆ. ಕಳೆದ ಮೂರು ವರ್ಷಗಳಲ್ಲಿ, ಈ ರಾಜ್ಯದಲ್ಲಿ ವಿಶೇಷವಾದ ಪ್ರಗತಿ ಸಾಧಿಸಿ, ಲಾಭಾಂಶ ಗಳಿಸಿ ಮೊದಲನೆಯ ಸ್ಥಾನದಲ್ಲಿರುವುದು ಬಿಜಾಪುರ ಡಿ.ಸಿ.ಸಿ. ಬ್ಯಾಂಕ್. ಮೊದಲ ವರ್ಷ ಮೂರೂವರೆ ಕೋಟಿ, ಎರಡನೇ ವರ್ಷ ಐದೂವರೆ ಕೋಟಿ ಹಾಗೂ ಮೂರನೇ ಅಂದರೆ ಈ ವರ್ಷ ಆರು ಕೋಟಿ ರೂಪಾಯಿಗಳಷ್ಟು ಲಾಭ ಗಳಿಸಿದೆ. ಆದುದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳಿಸಿಕೊಟ್ಟಿದ್ದರು. ಅದಕ್ಕೆ ನಾನು ಉತ್ತರವನ್ನು ಕಳಿಸಿಕೊಟ್ಟಿದ್ದೆ. ಆದರೆ ಇಲ್ಲಿ ಬಿಸಿನೆಸ್ ಜಾಸ್ತಿ ಇದ್ದದ್ದರಿಂದ ಅದು ಚರ್ಚೆಗೆ ಬರಲಿಲ್ಲ. ಆದರೆ ಅವರೇನು ಪ್ರಸ್ತಾಪ ಮಾಡಿದ್ದಾರೆ ಅದು ನಿಜ. ಇದಕ್ಕೆ ಸರ್ಕಾರ ತಡೆಯಾಜ್ಞೆ ಕೊಟ್ಟಿದ್ದು ನಿಜ. ಹಿಂದಿನ ಸರ್ಕಾರ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದೂ ನಿಜ. ಆದರೆ ಕೆಲವು ಸಂದರ್ಭಗಳಲ್ಲಿ ಜವಾಬ್ದಾರಿಯುತ ವ್ಯಕ್ತಿಗಳು ಬಂದು ಹಲವಾರು ವಿಚಾರಗಳನ್ನು ಹೇಳಿದಾಗ ಅದರ ಬಗ್ಗೆ ನಾವು ಗಮನವನ್ನು ಹರಿಸಬೇಕಾಗುತ್ತದೆ. ಇನ್ನೊಂದು ವಾರದಲ್ಲಿ ಅದರ ಬಗ್ಗೆ ಏನಾದರೂ ಸೂಕ್ತವಾದ ಪರಿಹಾರದ ವ್ಯವಸ್ಥೆಯನ್ನು ಮಾಡುತ್ತೇನೆಂದು ಭರವಸೆಯನ್ನು ನೀಡುತ್ತೇನೆ.

## ಶಾಸನ ರಚನೆ

## ಪರ್ಯಾಲೋಚನಾ ಪ್ರಸ್ತಾವ

(ಅ) ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ, 2000

ಅಧ್ಯಕ್ಷರು: ಗೃಹ ಸಚಿವರೇ, ವಿಧೇಯಕವನ್ನು ಪರ್ಯಾಲೋಚನೆಗೆ ಮಂಡಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):- ಅಧ್ಯಕ್ಷರೇ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ 2000ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಈಗಾಗಲೇ ನಾನು ಕೇಳಿಕೊಂಡಿದ್ದೇನೆ. ನಾವು ಇದನ್ನು ಹೊಸದಾಗಿ ತಂದದ್ದೇನಲ್ಲ. ಮಾನ್ಯ ಸಿಂಧ್ಯರವರ ಸರ್ಕಾರವಿದ್ದಾಗ ಮಹಾರಾಷ್ಟ್ರದ ಮಾದರಿಯಲ್ಲಿ ತಯಾರು ಮಾಡಿದಂಥ ಕಾನೂನು. ಇದನ್ನು ಕಾನೂನು ಇಲಾಖೆ ಮತ್ತು ಇತರ ಇಲಾಖೆಗಳು ಪರಿಶೀಲನೆ ಮಾಡಿ ಅದನ್ನು ಕಾನೂನಿನ ರೂಪದಲ್ಲಿ ತರತಕ್ಕ ವ್ಯವಸ್ಥೆಯಾಗಬೇಕಾಗಿತ್ತು. ಆರ್ಗನೈಸ್ಡ್ ಕ್ರೈಮ್ಸ್‌ಗಳಾದ ಗ್ಯಾಂಗ್‌ವಾರ್ಸ್, ಆ್ಯಂಟಿಸೋಷಿಯಲ್ ಎಲಿಮೆಂಟ್ಸ್ ಗಳಲ್ಲಿ ತೊಡಗಿರುವವರಿಗೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳಬೇಕೆಂದರೆ ಇಂಡಿಯನ್ ಪೀನಲ್ ಕೋಡ್‌ನಲ್ಲಾಗಲಿ, ಪೋಲೀಸ್ ಆಕ್ಟ್ ನಲ್ಲಾಗಲಿ, ಬೇರೆ ಕಾನೂನಿನಲ್ಲಾಗಲಿ ವ್ಯವಸ್ಥೆ ಇಲ್ಲ. ಆದ್ದರಿಂದ ಇದಕ್ಕಾಗಿ ವಿಶೇಷವಾದ ಕಾನೂನು, ವಿಶೇಷವಾದ ಕೋರ್ಟ್, ವಿಶೇಷವಾದ ಪ್ರಾಸಿಕ್ಯೂಟರ್, ಶಿಕ್ಷೆ ವಿಧಿಸತಕ್ಕ ವ್ಯವಸ್ಥೆ ಸಹ ಬೇರೆ ಈ ರೀತಿಯಾಗಿ ಈ ಕಾನೂನನ್ನು ತಂದಿದ್ದೇವೆ. ಎರಡು ವರ್ಷಗಳ ಹಿಂದೆ ಇದನ್ನು ಮಹಾರಾಷ್ಟ್ರದಲ್ಲಿ ಜಾರಿಗೆ ತಂದಿದ್ದಾರೆ. ಇಲ್ಲಿ ಇದು ಪಾಸ್ ಆದ ಮೇಲೆ ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಕೇಂದ್ರ ಸರ್ಕಾರದ ಅಪ್ರೂವಲ್ ಇಲ್ಲದೆಯೇ ನಾವು